ಕಲ್ಯಾಣಿ ಮನೆಗೆ ಹೊರಡುವಷ್ಟರಲ್ಲಿ ಮುಸ್ಸಂಜೆಯಾಗಿ ಹೋಯಿತು. ನಿಲಯದ ಹಿಂದಿನ ಸಣ್ಣ ಕಾಡಿನ ಹಾದಿ ಮೂಲಕ ಹಾದು ಹೋದರೆ ನಿಗದಿ ಬಸ್ ನಿಲ್ಲುವ ಹಳಿಯಾಳ ಕ್ರಾಸ್ ಸನಿಹವಾಗುತ್ತದೆ. ಅಂದು ಸಂಜೆಯಾಗದಿದ್ದರೂ ಮೋಡ ಕವಿದು ಮುಸುಕಿದ ಮಬ್ಬಿನಲ್ಲಿ ದೀಪ ಹಚ್ಚುವ ಹೊತ್ತಿನಂತೆ ಭಾಸವಾಗಿತ್ತು. ಕಾಡಿನ ಒಳದಾರಿಯಲ್ಲಿ ಜನಸಂಚಾರ ವಿರಳ. ಅಪರೂಪಕ್ಕೆ ನವಪ್ರೇಮಿಗಳು ಮರ ಸುತ್ತುವ ದೃಶ್ಯ ಕಾಣಬಹುದಷ್ಟೆ. ದಿನದ ಡ್ಯೂಟಿ ಮುಗಿದು ಮನೆಗೆ ಹೊರಟಿದ್ದ ರಾವ್ ಹೊರಗೆ ಕಲ್ಯಾಣಿ ಆತಂಕದಿಂದ ಚಡಪಡಿಸುತ್ತಿದ್ದದ್ದು ಕಂಡು, ‘ಕ್ರಾಸಿಗೆ ಬಿಡ್ತೀನಿ ಬಾ’ ಎಂದರು. ನಿರುಪಾಯಳಾದ ಅವಳು ಒಲ್ಲೆ ಅನ್ನಲಿಲ್ಲ. ರೇಲ್ವೆ ಸಿಬ್ಬಂದಿಯ ತರಬೇತಿ ಶಾಲೆಯನ್ನು ಎಡಕ್ಕೆ ಬಿಟ್ಟು, ಆಕಾಶವಾಣಿ ಸಿಬ್ಬಂದಿಗಳ ವಸತಿಗೃಹಗಳ ಸಾಲನ್ನು ಬಲಕ್ಕೆ ಇಟ್ಟು ಇಬ್ಬರೂ ನಡೆದರು. ಆಚೀಚೆಯ ರಸ್ತೆ ದೀಪಗಳನ್ನು ತಡೆದ ಮರಗಳ ನಡುವಿನ ಡೊಂಕು ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದಂತೆ ಎಲೆಗಳ ಮೇಲೆ ಅಕಾಲಿಕ ಮಳೆ ಹನಿಗಳು ಉದುರಿ ಮಾಡುತ್ತಿದ್ದ ಪಟಪಟ ಸದ್ದು ಕೇಳಿತು. ‘ಹಕ್ಕಿಗಳು ರೆಕ್ಕೆ ಬಡಿತಾವ ಅಂದ್ಕೊಂಡೆ, ಆದ್ರ ಮಳಿ ಸುರು ಆತು ನೋಡು’ ರಾವ್ ಹನಿಯಿಂದ ತಪ್ಪಿಸಿಕೊಳ್ಳಲು ಮರವೊಂದರ ಮರೆ ಆಶ್ರಯಿಸಿದರು. ‘ತಡಿ, ಛತ್ರಿ ತಂದೀನಿ’ ಕಲ್ಯಾಣಿ ಬ್ಯಾಗಿನಿಂದ ಹೊರ ತೆಗೆದ ಛತ್ರಿ ಬಿಡಿಸಿದಳು. ಇಬ್ಬರೂ ಮೈ ಅಂಟಿಸಿಕೊಂಡು ಮಾತಾಡದೆ ನಡೆದರು. ಮುಸ್ಸಂಜೆ ಮತ್ತು ಮಳೆಯ ಕೃಪೆಯಿಂದ ಅನಾಯಾಸ ಪ್ರಾಪ್ತವಾದ ಕೊಡೆಯಡಿಯ ಬೆಚ್ಚನೆಯ ಬೆಸುಗೆಯ ಸಖ್ಯವನ್ನು ಒದ್ದೆಯಾದರೂ ಅವರು ತೊಡೆಯದಾದರು. ತಿರುವೊಂದರ ಮರದ ಹಿಂದೆ ಉತ್ಕಟ ಮುತ್ತಿನ ಅಮಲಿನಲ್ಲಿ ಮೈಮರೆತ ಯಾರೋ ಇಬ್ಬರು ತುಟಿಗೆ ಬೀಗ ಬಿಗಿದ ಹರೆಯದ ಪ್ರೇಮಿಗಳು ದೂರ ಸರಿದರು. ಅವರ ಐಕ್ಯತೆಯಲ್ಲಿ ನಾಲ್ಕು ಕಾಲಿನ ಪ್ರಾಣಿಯಾಗಿ, ನಾಲ್ಕು ಹಸ್ತಗಳ ದೇವರಾಗಿ ಮೂಡಿದ ಮಿಥುನ ಪ್ರತಿಮೆ ನೋಡದಂತೆ ನಟಿಸಿ ನಡೆದ ರಾವ್ ಮತ್ತು ಕಲ್ಯಾಣಿಯ ಮೌನದಲ್ಲಿ ಮುದ್ರೆ ಒತ್ತಿ ಹೋಯಿತು. ಕೊಡೆ ಹಿಡಿದ, ತನ್ನ ನೆನೆದ ಬೆನ್ನನ್ನು ಬಳಸಿ ಅಲಂಗಿಸಿದ ರಾವ್ ಕೈಯನ್ನು ಕ್ರಾಸ್ ಕಾಣುತ್ತಿದ್ದಂತೆ ಕಲ್ಯಾಣಿ ಮೃದುವಾಗಿ ಬದಿಗೆ ಸರಿಸಿದಳು ಮತ್ತು ಸೆರಗು ಹೊದೆದಳು. ಕ್ಷಣದ ಹಿಂದೆ ಗತಿಸಿಹೋದ ಬೆಚ್ಚನೆಯ ಒದ್ದೆ, ಉದ್ವೇಗದಿಂದ ಕಂಪಿಸಿದ ಅಪೂರ್ವ ಸುಯೋಗವನ್ನು ಅದರ ಪಾಡಿಗೆ ಅದನ್ನು ಮಳೆ ಪಡೆದ ಕಾಡಿನಲ್ಲಿ ಬಿಟ್ಟು ಇಬ್ಬರೂ ತಿರುಗಿ ನೋಡಬೇಕೆಂಬ ಇಚ್ಛೆಯ ಆಮಿಷವನ್ನು ಮೀರಿ ಕಣ್ಮರೆಯಾದರು.

ಮುಸ್ಸಂಜೆಯ ನಾಜೂಕು ಒಡನಾಟ ನುಡಿಯಲ್ಲಿ ಒಡೆಯಬಹುದೆಂಬ ಭಯದಲ್ಲಿ ಇಬ್ಬರಿಗೂ ಅದನ್ನು ಮಾತಿಗೆಳೆಯುವುದು ಬೇಕಿರಲಿಲ್ಲ. ನೆನಪಿರಲಿಲ್ಲ ಎಂದಲ್ಲ; ಆದರೆ ಅದು ಮೌನದಲ್ಲೇ ಕ್ಷೇಮದಲ್ಲಿರಲೆಂದು ತಟಸ್ಥವಾಗಿದ್ದರು. ಈವರೆಗೆ ನಾಮಕರಣವಾಗಿರದ ಸಂಬಂಧ ಮುಂದೆ ಬಂಧನವಾಗದಂತೆ ನೋಡಿಕೊಳ್ಳುವ ಉಸ್ತುವಾರಿಕೆ ದೊಡ್ಡದು ಎಂಬಂತೆ ತಮ್ಮ ಸಹವಾಸಕ್ಕೆ ಹಕ್ಕಿನ ಸಹಿ ಹಾಕದೆ ಉಳಿದರು. ಮುಚ್ಚುಮರೆಯಿಲ್ಲದ ಅವರ ಓಡಾಟ, ನಿಜವನ್ನು ಅಡಗಿಸದ ಸಂಕೋಚರಹಿತ ನಗು, ಕೃತಕವಾಗದ ಮೆಚ್ಚುಗೆಯ ಮಾತು, ಷರತ್ತಿಗೊಳಪಡದ ಭೇಟಿ ಎಲ್ಲವನ್ನೂ ಗಮನಿಸಿದ ನಿಲಯದ ಸಿಬ್ಬಂದಿ ಅವರು ಮದುವೆಯಾಗಲಿರುವ ಅನುರೂಪದ ಜೋಡಿ ಜೀವಗಳೆಂದು ತೀರ್ಮಾನಿಸಿದ್ದರು. ಕಲ್ಯಾಣಿಗೆ ತನ್ನ ಪ್ರತಿ ಗಾಯನವೂ ರಾವ್ ಅವರಿಗೆ ಅರ್ಪಿತ ಎಂಬ ಧನ್ಯತೆಯಿದ್ದರೂ ಅವಳ ಧ್ವನಿಮುದ್ರಿತ ಗಾಯನವನ್ನು ಬಿತ್ತರಿಸುವಾಗ ರಾವ್ ಅವರ ದನಿ ಅತ್ಯಂತ ಕೋಮಲವಾದರೂ ಅವರ ನಂಟು ಕಂಕಣ ಭಾಗ್ಯದ ಜಪ್ತಿಗೆ ಸಿಗದೆ ತರಂಗಾಂತರದಲ್ಲೇ ಉಳಿದು ಹೋಯಿತು.

ಸಂಸಾರದ ನೆಲದಲ್ಲಿ ನೆಲೆಸಿ, ದಾಂಪತ್ಯದಲ್ಲಿ ಫಲವತ್ತಾಗಿ ಬೆಳೆಯುವ ಆಸೆ ತೊರೆದ ಅವರ ಒಳನಂಟು ಲೋಕಕ್ಕೆ ಅಂಟಿಕೊಳ್ಳಲೇ ಇಲ್ಲ. ರಾವ್ ಶ್ರುತಿ ಮಾಡಿದ ತಂಬೂರಿಯ ತಂತಿಯ ಝೇಂಕಾರದ ಆವರ್ತನದಲ್ಲಿ, ಕಲ್ಯಾಣಿಯ ಷಡ್ಜದ ಶಿಖರದಲ್ಲಿ ಇಬ್ಬರೂ ವಿಹರಿಸುತ್ತಿದ್ದರು. ಕಾಲದಲ್ಲಿ ಹುಟ್ಟಿ ಕಾಲದಲ್ಲಿ ಬೆಳೆದು ಕಾಲದಲ್ಲೇ ಲೀನವಾಗುವ ನಾದದಂತಿದ್ದ ಅವರ ಅನುರಾಗ ದೇಶದ ಕಕ್ಷೆಗೆ ಬರಲೇ ಇಲ್ಲ. ಗುರಿಯ ಹಿಂದೆ ಬೀಳದ ಧಾರವಾಡದ ದುಂಡು ಸುತ್ತುವ ದಾರಿಗಳಲ್ಲಿ ಅವರು ನಡೆದರೇ

